ಭಾರಿ ಮಳೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೊಂದ ಸಂತ್ರಸ್ಥರಿಗೆ ನೀಡಿದ ಪರಿಹಾರದ ಬಗ್ಗೆ

1653 - ಶ್ರೀ ವಸಂತ. ವಿ. ಸಾಲಿಯಾನ (ಕಾಪು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಈ ವರ್ಷದ ಮಳೆಗಾಲದಲ್ಲಿ ಬಂದಂತಹ ಭಾರಿ ಮಳೆ, ನೆರೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಭವಿಸಿದ ಒಟ್ಟು ಹಾನಿ, ನಷ್ಟದ ಪ್ರಮಾಣ ಎಷ್ಟು ಹಾಗೂ ಸಂಭವಿಸಿದ ಜೀವ ಹಾನಿ ಎಷ್ಟು? (ಸರ್ಕಾರಿ ಮತ್ತು ಖಾಸಗಿ ಸ್ವತ್ತುಗಳ ವಿವರ ನೀಡುವುದು)*

ಆ) *ಜೀವ ಹಾನಿ ಸಂಭವಿಸಿದ ಎಷ್ಟು ಕುಟುಂಬಗಳ ಅವಲಂಬಿತರಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಪರಿಹಾರ ನೀಡಲಾಗಿದೆ, ನೀಡಲಾದ ಪರಿಹಾರ ಎಷ್ಟು?*

ಇ) *ಜಿಲ್ಲೆಯಲ್ಲಿ ಎಷ್ಟು ಮನೆಗಳಿಗೆ ಹಾನಿಯಾಗಿದೆ? ಅವರುಗಳಿಗೆ ನೀಡಲಾದ ಪರಿಹಾರಧನ ಎಷ್ಟು?*

ಶ್ರೀ ರಮೇಶ್ ಸಿ. ಜಗಜಿಣಗಿ (ಕಂದಾಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರಿ ಮಳೆ : ಪ್ರವಾಹದಿಂದ ಆಗಿರುವ ಖಾಸಗಿ ಹಾಗೂ ಸಾರ್ವಜನಿಕ ಆಸ್ತಿಗಳ ಹಾನಿ ವಿವರ ಕೆಳಕಂಡಂತಿದೆ.

1.	ಜೀವಹಾನಿ	:	19 ಮಂದಿ
2.	ಜಾನುವಾರು ಹಾನಿ	:	29
3.	ಕೃಷಿ ಬೆಳೆ ಹಾನಿ	:	1743.60 ಹೆಕ್ಟೇರ್
	ತೋಟಗಾರಿಕಾ ಬೆಳೆ	:	2.26 ಹೆಕ್ಟೇರ್
4.	ವಾಸದ ಮನೆಗಳು-		
	ಪೂರ್ಣ	:	119
	ಭಾಗಶಃ	:	681
5.	ಸಾರ್ವಜನಿಕ ಕಟ್ಟಡ	:	112
6.	ಕಾಲುಸಂಕ : ಮೋರಿ	:	76
7.	ಸಣ್ಣ ನೀರಾವರಿ ಕಾಮಗಾರಿ	:	39
8.	ಹಾನಿಗೊಂಡ ರಸ್ತೆಗಳು	:	1140 ಕಿ.ಮೀ.
9.	ಸಮುದ್ರ ಕೊರೆತ	:	38 ಕಡೆಗಳಲ್ಲಿ
10.	ನದಿ ಕೊರೆತ	:	11 ಕಡೆಗಳಲ್ಲಿ
	ಖಾಸಗಿ ಆಸ್ತಿಗಳ ಒಟ್ಟು ಹಾನಿ	:	ರೂ.1.58 ಕೋಟಿ
	ಸಾರ್ವಜನಿಕ ಆಸ್ತಿಗಳ ಹಾನಿ	:	ರೂ.11.89 ಕೋಟಿ
			ರೂ.13.47 ಕೋಟಿ

ಆ) ಜೀವ ಹಾನಿ ಸಂಭವಿಸಿದ 19 ಪ್ರಕರಣಗಳ ಪೈಕಿ 9 ಮಂದಿ ಮೃತರ ಹತ್ತಿರದ ವಾರಸುದಾರರಿಗೆ ಅನುಕಂಪ ಭತ್ಯೆಯನ್ನು ತಲಾ ರೂ.1.00 ಲಕ್ಷದಂತೆ ಈವರೆಗೆ ನೀಡಲಾಗಿದೆ.

ಇ) 119 ಮನೆಗಳು ಪೂರ್ಣವಾಗಿ ಹಾಗೂ 681 ಮನೆಗಳು ಭಾಗಶಃವಾಗಿಯೂ ಹಾನಿಗೊಂಡಿವೆ. ಈವರೆಗೆ ನೀಡಿರುವ ಪರಿಹಾರದ ವಿವರ ಹೀಗಿದೆ -

1.	ಪೂರ್ಣ ಹಾನಿಗೊಂಡ 68 ಮನೆಗಳಿಗೆ	:	ರೂ.5.20 ಲಕ್ಷಗಳು
2.	ಭಾಗಶಃ ಹಾನಿಗೊಂಡ 509 ಮನೆಗಳಿಗೆ	:	ರೂ. 3.82 ಲಕ್ಷಗಳು
	ಒಟ್ಟು	:	ರೂ. 9.02 ಲಕ್ಷಗಳು

ರಾಜ್ಯದಲ್ಲಿ ಎ.ಪಿ.ಎಂ.ಸಿ.ಕಾಮಗಾರಿ

1654 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1995-96 ರಿಂದ ಎ.ಪಿ.ಎಂ.ಸಿ. ಗ್ರಾಂಟಿನಿಂದ ಮಾಡಲಾದ ಕಾಮಗಾರಿ ಸಂಖ್ಯೆ ಎಷ್ಟು? ಅದರ ಮೊತ್ತವೆಷ್ಟು?

ಆ) 1995-96ರಿಂದ ಇಲ್ಲಿಯ ತನಕ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರು ಮಾಡಲಾದ ಕಾಮಗಾರಿ ಸಂಖ್ಯೆ ಎಷ್ಟು? ಅದರ ಮೊತ್ತ ಎಷ್ಟು ? (ವಿಧಾನಸಭಾ ಕ್ಷೇತ್ರವಾರು ಕಾಮಗಾರಿ ವಿವರ ನೀಡುವುದು).

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿಗೆ ನಿಗಧಿಸಿದ ಮೊತ್ತವೆಷ್ಟು?

ಈ) 1996-97ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನಲ್ಲಿ ಕಡಿಮೆ ಕಾಮಗಾರಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ಕಾಮಗಾರಿ ಪೂರ್ಣ ಮಾಡಲು ಸರ್ಕಾರವು ಯಾವ ಕ್ರಮ ತೆಗೆದುಕೊಳ್ಳುವುದು?

ಊ) 1997-98ರಲ್ಲಿ ಉತ್ತರ ಕನ್ನಡ ಜಿಲ್ಲೆ ಪ್ರತಿ ತಾಲ್ಲೂಕಿಗೆ ನಿಗಧಿಪಡಿಸಿದ ಹಣವೆಷ್ಟು?

ಎ) 1997-98ರಲ್ಲಿ ಉತ್ತರ ಕನ್ನಡ ಜಿಲ್ಲೆ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರಾದ ಕಾಮಗಾರಿ ಯಾವುವು? (ವಿವರವಾದ ಮಾಹಿತಿ ನೀಡುವುದು)

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ1995-96ನೇ ಸಾಲಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ರೂ.3150 ಲಕ್ಷಗಳ ಮೊತ್ತದ ಗ್ರಾಂಟ್‌ನಲ್ಲಿ ಒಟ್ಟಾರೆ 981 ಸಂಪರ್ಕ ರಸ್ತೆ ಕಾಮಗಾರಿಗಳನ್ನು ಕೈಗೊಂಡಿದ್ದು ಅದರ